PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 172-179
©IIMRD, Mysuru
www.iimrd.com

# ಭಾರತದಲ್ಲಿ ಭ್ರೂಣ ಹತ್ಯೆಗೆ ಕಾರಣ ಮತ್ತು ಪರಿಣಾಮ: ಒಂದು ವಿಶ್ಲೇಷಣೆ

ಬಸವರಾಜ ಹಿರೇಮಠ ಬಾದರ್ಲಿ[1]

## ಪೀಠಿಕೆ

ಭಾರತೀಯ ಸಮಾಜವು ಶತ–ಶತಮಾನಗಳಿಂದಲೂ ಊಹಿಸಲಾದ ಸಾಂಸ್ಕೃತಿಕ ಕಾರಣಗಳಿಂದಾಗಿ ಹುಟ್ಟಿಕೊಂಡ ಸಮಸ್ಯೆಯಲ್ಲಿ ಸ್ತ್ರೀ ಭ್ರೂಣ ಹತ್ಯೆಯು ಒಂದು. ಆದರೆ, ಈ ಸಮಸ್ಯೆಯು ಪ್ರಚಲಿತ ಸಾಮಾಜಿಕ ವ್ಯವಸ್ಥೆಯ ಸ್ಥಿತಿಗೆ ಕಾರಣವಾದ ಸಮಸ್ಯೆಯಾಗಿ ಮತ್ತು ಗಂಭೀರ ಸ್ವರೂಪವನ್ನು ಪಡೆದುಕೊಳ್ಳುತ್ತಾ ಸವಾಲಾಗಿ ಪರಿಣಮಿಸಿದೆ.

ಸಾಮಾಜಿಕ ಚಿಂತನೆಯಲ್ಲಿ ಸಂಶೋಧನಾತ್ಮಕವಾಗಿ ಅಧ್ಯಯನ ನಡಸಲಾಗಿ ಸ್ತ್ರೀ ಭ್ರೂಣ ಹತ್ಯೆಯು ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಲಿಂಗಾನುಪಾತದಲ್ಲಿ ಅಸಮಾನತೆಯನ್ನು ಸೃಷ್ಟಿಸುತ್ತಾ ಸಾಗಿದೆ. ಭ್ರೂಣ ಹತ್ಯೆ ನಿಯಂತ್ರಣಕ್ಕಾಗಿ ಕಾನೂನಾತ್ಮಕ ಕ್ರಮಗಳನ್ನು ಜಾರಿಗೆ ತರಲಾಗಿದ್ದರೂ ಹಾಗೂ ತಿಳುವಳಿಕೆ ಮೂಡಿಸುವಲ್ಲಿ ನಡೆದ ಪ್ರಯತ್ನಗಳು ನೀರೀಕ್ಷಿತ ಪ್ರಮಾಣ ಬೀರಿಲ್ಲ. ಭ್ರೂಣ ಹತ್ಯೆಯ ಸಮಸ್ಯೆ ಗಂಭೀರ ಸವಾಲಾಗಿ ಪರಿಣಮಿಸಲು ಕಾರಣವಾಗಿವೆ. ಪ್ರಸ್ತುತ ಲೇಖನದಲ್ಲಿ ಭ್ರೂಣ ಹತ್ಯೆಯಿಂದಾಗಿ ಭಾರತೀಯ ಸಮಾಜದ ಮೇಲಾಗುತ್ತಿರುವ ಪರಿಣಾಮವನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

ಸಾಮಾನ್ಯ ಅರ್ಥದಲ್ಲಿ ಹೆಣ್ಣು ಭ್ರೂಣವನ್ನು ಗರ್ಭಪಾತ ಮಾಡಿಸುವಿಕೆಯನ್ನು ಭ್ರೂಣ ಹತ್ಯೆ ಎನ್ನಬಹುದು. ಸಾಮಾಜಿಕ ಚಿಂತನೆಯ ದೃಷ್ಟಿಕೋನದಿಂದ ವ್ಯಾಖ್ಯೆನಿಸುವುದಾದರೆ. "ಗರ್ಭದಿಂದ ಹೆಣ್ಣು ಅಥವಾ ಸ್ತ್ರೀ ಭ್ರೂಣವನ್ನು ಪತ್ತೆ ಹಚ್ಚಿ ಅದನ್ನು ಗರ್ಭಪಾತವಾಗುವಂತ ಮದ್ದು ಅಥವಾ ಔಷದವನ್ನು ನೀಡಿ ಇಲ್ಲವೇ ಶಸ್ತ್ರ ಚಿಕಿತ್ಸೆಯಿಂದ ನಾಶಪಡಿಸುವದು ಅಥವಾ ತೆಗೆಯುವದು ಅಥವಾ ಕೊಲ್ಲುವದು ಸ್ತ್ರೀ ಭ್ರೂಣ ಹತ್ಯೆ" ಎಂದು ಕರೆಯಬಹುದಾಗಿದ್ದು, "ಹೆಣ್ಣು ಭ್ರೂಣ ಅಥವಾ ಸ್ತ್ರೀ ಭ್ರೂಣಾವಸ್ಥೆಯಲ್ಲಿ ಗರ್ಭಪಾತ ಮಾಡಿಸುವಿಕೆಯನ್ನು ಸ್ತ್ರೀ ಭ್ರೂಣ ಹತ್ಯೆ "ಎಂದು ಕರೆಯಬಹುದಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಪ್ರದಾಯಗಳು ಮತ್ತು ಆರ್ಥಿಕ ನೀತಿಗಳು ಹೆಣ್ಣು ಶಿಶು, ಸ್ತ್ರೀ ಭ್ರೂಣ ಹತ್ಯೆಗೆ ಪ್ರಮುಖ ಕಾರಣಗಳು. ಬಹಳ ಹಿಂದಿನಿಂದಲೂ ಸಾಂಸ್ಕೃತಿಕ ಪರಂಪರೆಯನ್ನುವಂತೆ ಕೆಲವು ಸಮುದಾಯಗಳಲ್ಲಿ ಹೆಣ್ಣು ಮಗು ಜನಿಸಿತೆಂದರೆ ಅದನ್ನು ಸಾಯಿಸಿ ಬೀಡಬೇಕು ಎಂಬ ಕ್ರೂರ ಆಚರಣೆಗಳೂ ಇದ್ದವೆಂದು ತಿಳಿದು ಬರುತ್ತವೆ. ಅದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ತಿಳಿದು ಬರುವ ಸಂಗತಿಗಳೇನೆಂದರೆ, ಜನಿಸುವ ಮಕ್ಕಳಲ್ಲಿ ಮೊದಲ ಮಗೂ ಹೆಣ್ಣಾದಲ್ಲಿ ಅನಿಷ್ಟವೆಂಬ ಮತ್ತು ಹೆಣ್ಣಿನಿಂದ ಮೊಕ್ಷವಿಲ್ಲವೆಂಬ ಧಾರ್ಮಿಕ–ಕಲ್ಪನೆಯ ಭಾವನೆಗಳು, ಅಲೆಮಾರಿ ಜೀವನದಲ್ಲಿ ಹೆಣ್ಣಿನ ಸಂರಕ್ಷಣೆ ಅಸಾಧ್ಯವಾದದು. ಹೀಗೆ ಪ್ರಾರಂಭದ ಕಾರಣಗಳಾದರೆ, ನಂತರದಲ್ಲಿ ವೇದೋತ್ತರದ

[1] *ಪ್ರಾಂಶುಪಾಲರು, ಶಾರದಾ ಮಹಿಳಾ ಪದವಿ ಮಹಾವಿದ್ಯಾಲಯ, ಸಿಂಧನೂರು.*

ಕಾಲಘಟ್ಟದಲ್ಲಿಯ ಸತಿ ಪದ್ದತಿ, ಪರದಾ ಪದ್ದತಿ, ಬಾಲ್ಯ ವಿವಾಹ ಪದ್ದತಿ, ಹೀಗೆ ಅನಿಷ್ಟ ಸಂಪ್ರಾದಾಯಗಳು ಹೆಣ್ಣು ಸಂತಾನ ನಾಶವಾಗುವದಕ್ಕೆ ಕಾರಣವಾದವು. ಅಲ್ಲದೆ ಮಧ್ಯಯುಗಲ್ಲಿ ಅನೇಕ ಆಕ್ರಮಣಕಾರಕ ರಾಜ ನೀತಿಗಳು ಲೈಂಗಿಕ ದೌರ್ಜನ್ಯ. ದೇವದಾಸಿ ಪದ್ದತಿ, ಮಹಿಳಾ ಸ್ವಾತಂತ್ರವಿಲ್ಲದಿರುವಿಕೆ, ಸಾಮಾಜಿಕ ಸ್ಥಾನ–ಮಾನಗಳಿಲ್ಲದಿರುವಿಕೆ ಹೀಗೆ ಅನೇಕ ಕಾರಣಗಳು ಸ್ತ್ರೀ ಭ್ರೂಣ ಹತ್ಯೆ ಅಥವಾ ಹೆಣ್ಣು ಶಿಶು ನಾಶ ಸಮಸ್ಯೆ ಉದಯಿಸಲು ಕಾರಣವಾಯಿತು. ಆಧುನಿಕ ಪ್ರಚಲಿತ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇಂದು ಸ್ತ್ರೀ ಭ್ರೂಣ ಹತ್ಯೆಗೆ ನೈಸರ್ಗಿಕ ಅವಾಂತರ, ಲಿಂಗ ತಾರತಮ್ಯ, ಅನಕ್ಷರತೆ, ಅಜ್ಞಾನ, ನಿರುದ್ಯೋಗ, ವರದಕ್ಷಿಣೆ ಪದ್ದತಿ. ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳು, ಆರ್ಥಿಕ ಸಂಕಷ್ಟತೆ, ಸಾಮಾಜಿಕ ಅಸಮಾನತೆ, ಹೀಗೆ ಹಲವಾರು ಕಾರಣಗಳನ್ನು ಕಾಣಬಹುದಾಗಿದೆ.

**ಪ್ರಚಲಿತ ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆಗೆ ಪ್ರಮುಖ ಕಾರಣಗಳು**

ಆಧುನಿಕ ಭಾರತವು ಕೈಗಾರೀಕರಣ, ನಗರೀಕರಣ, ತಂತ್ರಜ್ಞಾನದ ಪ್ರಗತಿಯ ಬರದಲ್ಲಿ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸಿವೆ. ಈ ಬದಲಾವಣೆಗಳು ಮತ್ತು ಶತ–ಶತಮಾನಗಳಿಂದಲೂ ದೂರವಾಗದೆ. ಉಳಿದ ಅನೇಕ ಸಾಂಸ್ಕೃತಿಕ ಅಂಶಗಳು ಪ್ರಚಲಿತ ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆಗೆ ಪ್ರಮುಖ ಕಾರಣವಾಗಿವೆಂದು ಹೇಳಬಹುದು.

**ಧಾರ್ಮಿಕ ಕಲ್ಪನಾ ಭಾವನೆಗಳು**

ಭಾರತವು ಧಾರ್ಮಿಕ ಆಚರಣೆಗಳಿಗೆ ಒತ್ತು ನೀಡುವ ದೇಶವೆಂದು ಕರೆಯಲಾಗತಿದ್ದು, ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನದ ವಿಧಾನದಲ್ಲಿ ಧರ್ಮ–ಧಾರ್ಮಿಕತೆ ಆಳವಾಗಿ ಬೆರೆತು ಬಿಟ್ಟಿದೆ, ಹೀಗಾಗಿ ಧಾರ್ಮಿಕ ಆಚರಣೆಗಳು ಇಂದಿಗೂ ಮನೆಮಾಡಿವೆ. ವ್ಯಕ್ತಿ ಹುಟ್ಟಿನಿಂದ ಪ್ರಾರಂಭವಾಗುವ ಧಾರ್ಮಿಕ ಆಚರಣೆಗಳು ಸಾಯುವವರೆಗೂ ಹಾಗೂ ಮುಂದೆಯೂ ಮುಂದುವರೆವ ವ್ಯವಸ್ಥೆಯಲ್ಲಿ ಮಾನವನ ಸಾಮಾಜಿಕ ಜೀವನ ಶೈಲಿ ಇಲ್ಲಿದೆ, ಇದರಿಂದಾಗಿ ಮೋಕ್ಷ ಸಂಪಾದನೆಗೆ ಗಂಡು ಸಂತಾನ ಬೇಕು, ಮನೆತನದ ವಂಶವೃದ್ಧಿಗೆ ಗಂಡು ಮಖ್ಯವೆಂಬುದು. ಹೀಗೆ ಅನೇಕ ಅಂಶಗಳು ಹಿಂದಿನಿಂದಲು ಹೆಣ್ಣನ್ನು ನಿರಾಕರಿಸುತ್ತಾ ಬರಲಾಗಿರುವ ಕಾರಣದಿಂದಾಗಿ ಹೆಣ್ಣು ಶಿಶು ಹತ್ಯೆ ಮತ್ತು ಸ್ತ್ರೀ ಭ್ರೂಣ ಹತ್ಯೆ ಕಾಣಿಸಿಕೊಂಡಿತು ಎಂದು ಹೇಳಬಹುದು.

**ಲಿಂಗ ತಾರತಮ್ಯ**

ಸಾಮಾಜಿಕ ವ್ಯವಸ್ಥೆಯಲ್ಲಿ ಬಹಳ ಹಿಂದಿನಿಂದಲೂ ಆವರಿಸಿರುವ ಹೆಣ್ಣು–ಗಂಡು ಎಂಬ ಭೇದ–ಭಾವ ಸಾಂಸ್ಕೃತಿಕ ಪಿಡುಗಾಗಿ ಬಾಧಿಸುತ್ತಾ ಬಂದಿದೆ. ಮಹಾತ್ಮ ಗಾಂಧೀಜಿಯವರು “ಮಹಿಳೆಯು ಮನುಷ್ಯನ ಸಂಗಾತಿ, ಅವಳು ಸಮಾನ ಮಾನಸಿಕ ಸಾಮರ್ಥ್ಯಗಳ ಕೊಡುಗೆ” ಎಂದು ಹೇಳಿದ್ದಾರೆ. ಆದರೆ ಗಂಡು ಮಗ ಮನೆಯ ಆದಾಯ, ಹೆಣ್ಣು ವೆಚ್ಚವೆಂಬದು, ಗಂಡು ಮಗುವಿನಿಂದ ಮೋಕ್ಷವೆಂಬದು, ಹೀಗೆ ಅನೇಕ ಹಿಂದಿನ ನಿಲುವುಗಳಿಗೆ ಈಗಲೂ ಜೋತು ಬಿದ್ದಿರುವುದು ಲಿಂಗ ತಾರತಮ್ಯತೆಗೆ ಕಾರಣವಾಗಿದೆ. ಆದರೂ ಈಗಲೂ ಈ ತಾರತಮ್ಯ ತೊಲಗಿಸಲು ಸಾಕಷ್ಟು ಪ್ರಯತ್ನಗಳು ನೆಡದರೂ ಪ್ರಯೋಜನೆಯಾಗಿಲ್ಲವೆಂದು ಹೇಳಿದರೆ ತಪ್ಪಿಲ್ಲ. ಕಾರಣ ಮಾನವವನು ವೈಜ್ಞಾನಿಕವಾಗಿ ಪ್ರಗತಿಯ

ಸಾಧನೆಯಲ್ಲಿ ಮಾನವೀಯತೆಯ ಮೂಲವನ್ನು ಮರೆತಿರುವನು. ಇದರಿಂದಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಭ್ರೂಣ ಹತ್ಯೆ ಸಮಸ್ಯೆ ಹೆಚ್ಚು ಬೆಳೆದುಕೊಂಡಿತು.

**ಅನಕ್ಷರತೆ ಮತ್ತು ಅಜ್ಞಾನ**

ಪ್ರಚಲಿತ ಭಾರತದಲ್ಲಿ ಸಾಕ್ಷರತಾ ಪ್ರಮಾಣ ಏರಿಕೆಯಾಗಿರುವದು ನಿಜ, ಆದರೆ ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಸಾಕ್ಷರತೆಯ ಕೊರತೆ ಇದೆ. ಅಲ್ಲದೆ ಮಾನವನಲ್ಲಿ ವೈಜ್ಞಾನಿಕತೆ ಬೆಳೆದಿದೆ. ಆದರೆ ಪರಿಪೂರ್ಣ ಜ್ಞಾನ ಬೆಳದಿಲ್ಲ. ಅದು ಭಾರತದ ಜಾಡ್ಯ ಸಂಸ್ಕೃತಿಯ ಪ್ರಭಾವವೋ ತಿಳಿಯದು. ಇದರಿಂದಾಗಿ ಮಾನವನಿಗೆ ಅನೇಕ ಸಮಸ್ಯೆಗಳು ಬಾಧಿಸುತ್ತಿವೆ. ಅಂತಹ ಸಮಸ್ಯೆಗಳಲ್ಲಿ ಸ್ತ್ರೀ ಭ್ರೂಣ ಹತ್ಯೆಯು ಒಂದು.

**ವರದಕ್ಷಿಣೆ ಪದ್ದತಿ**

ಭಾರತದಲ್ಲಿ ವರದಕ್ಷಣಿ ಪದ್ದತಿಯು ಇಂದು ನಿನ್ನೆಯದಲ್ಲವಾದರೂ ಮತ್ತು ಇದರ ನಿಷೇದಕ್ಕೆ ಕಾನೂನುಗಳಿದ್ದರೂ, ತೆರೆಯ ಮರೆಯಲ್ಲಿ ಇನ್ನೂ ಪ್ರಚಲಿತದಲ್ಲಿರುವ ಸಮಸ್ಯೆಯಾಗಿದೆ ಎಂದು ಹೇಳಬಹುದು. ಕೈಗಾರೀಕರಣ, ನಗರೀಕರಣ, ಪ್ರಭಾವದಿಂದಾಗಿ ಮನುಕುಲದಲ್ಲಿ ಮಾನವನ ವರ್ತನಾ ಮಾದರಿಯಲ್ಲಿ ಹಾಗೂ ಅವನ ಬದುಕಿನ ಶೈಲಿಯಲ್ಲಿ, ಆರ್ಥಿಕ ಸ್ಥಿತಿಗತಿಯಲ್ಲಿ. ಹೀಗೆ ಸಾಕಷ್ಟು ಪತಿವರ್ತನೆಗಳಾಗಿವೆ. ಇದರಿಂದಾಗಿ ವರದಕ್ಷಿಣೆ ಪದ್ದತಿ ಬೆಳೆದು ನಿಂತಿದೆ. ಈ ಸಮಸ್ಯೆಯ ಪರಿಣಾಮ ಮತ್ತು ಪ್ರಭಾವದಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಭ್ರೂಣ ಹತ್ಯೆ ಸಮಸ್ಯೆ ಹೆಚ್ಚುತ್ತಾ ಸಾಗಿದೆ ಎಂದು ಹೇಳಬಹುದು.

**ಹೆಚ್ಚುತ್ತಿರುವ ಲೈಂಗಿಕ ದೌರ್ಜ್ಯನ್ಯಗಳು**

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಮೇಲೆ ನೆಡೆಯುತ್ತಿರುವ ದೌರ್ಜ್ಯನ್ಯಗಳು ಈಗಷ್ಟೆ ಕಾಣಿಸಿ ಕೊಂಡವುಗಳಲ್ಲಾ. ಇವು ಪುರೋಹಿತಶಾಹಿ ವ್ಯವಸ್ಥೆಯಿಂದಲೂ ಕಂಡುಬರುತ್ತವೆ. ಹಿಂದೆ ಸಾಮಾಜಿಕ ಸ್ಥಾನಮಾನಗಳಿಂದ ಕಡೆಗಾಣಿಸಿರುವಿಕೆ, ಹೆಣ್ಣು ಭೋಗದ ವಸ್ತು, ದೇವದಾಸಿ ಪದ್ದತಿ ಎಂಬ ಅನಿಷ್ಟ ಪದ್ದತಿಯಿಂದ ಲೈಂಗಿಕ ದೌರ್ಜನ್ಯ ಪ್ರಾರಂಭವಾದರೆ, ಇಂದು ತಂತ್ರಜ್ಞಾನದ ಫಲದಿಂದ ಕೈಗಾರೀಕರಣ, ನಗರೀಕರಣದ ಭರಾಟೆಯಲ್ಲಿ ಅಶ್ಲೀಲ ಚಿತ್ರ ಮಾಧ್ಯಮಗಳ ಪ್ರಭಾವದಿಂದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಿವೆ. ಇದರಿಂದ ಹೆಣ್ಣನ್ನು ಹಡೆದ ತಂದೆ–ತಾಯಿಯರಲ್ಲಿ ಆತಂಕವಿದೆ ಮತ್ತು ಗಂಡು ಸಂತಾನವನ್ನೆ ಪಡೆಯಬೇಕೆಂಬ ಹಂಬಲ ಹೆಚ್ಚುತ್ತಿದೆ. ಇದರಿಂದಾಗಿ ಸ್ತ್ರೀ ಭ್ರೂಣ ಹತ್ಯೆ ಸಮಸ್ಯೆ ಹೆಚ್ಚುತ್ತಾ ಸಾಗಿದೆ ಎಂದು ಹೇಳಬಹುದು.

**ಆರೋಗ್ಯ ವಲಯದಲ್ಲಿ ತಂತ್ರಜ್ಞಾನದ ಪ್ರಗತಿ**

ಭಾರತದಲ್ಲಿ ಆರೋಗ್ಯ ವಲಯದಲ್ಲಿ ಪ್ರಗತಿಸಾದಿಸಲು ಇಂದು ತಂತ್ರಜ್ಞಾನವನ್ನು ಬಳಸಿಕೊಂಡಿರುವದು ಕಂಡುಬರುತ್ತದೆ. ಇದು ಹೆಚ್ಚು ಪೂರಕವಾಗಿದ್ದರೂ ಸ್ತ್ರೀ ಭ್ರೂಣ ಹತ್ಯೆಗೆ ಆರೋಗ್ಯ ವಲಯದಲ್ಲಿ ಲಿಂಗ ಪತ್ತೆಮಾಡುವ ಯಂತ್ರಗಳು–ತಂತ್ರಜ್ಞಾನದ ಪ್ರಗತಿಯೂ ಕಾರಣವೆನ್ನಬಹುದು.

**ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆಯಿಂದಾದ ಪರಿಣಾಮಗಳು**

ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆಯು ಸಾಮಾಜಿಕ ವ್ಯವಸ್ಥೆಯಲ್ಲಿಯೇ ಒಂದು ಸಾಮಾಜಿಕ ದುರಂತ. ಈ ಕುರಿತಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಾಕಷ್ಟು ಚಿಂತನೆ ನೆಡೆದಿವೆ. ಇನ್ನೂ ಮಾಡಬೇಕಾಗಿಯೂ ಇದೆ. ಕಾರಣವೆಂದರೆ ನಮ್ಮ ಸಾಮಾಜಿಕ ವ್ಯವಸ್ಥೆಯ ಸಮತೋಲನೆಗೆ ಇದು ಅಗತ್ಯವು ಕೂಡ. ಸಾಮಾಜಿಕ ಸಮಸ್ಯೆಗಳನ್ನು ನಿರ್ಮೂಲನೆಗೊಳಿಸಲು ಸಾಕಷ್ಟು ಪ್ರಯತ್ನಗಳಿದ್ದರು ಸಮಸ್ಯೆಗಳಿಂದಾಗುವ ಪರಿಣಾಮಗಳು ಇನ್ನು ತಪ್ಪಿಲ್ಲ. ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಲ್ಲಿ ಹೆಣ್ಣು ಶಿಶು ಹತ್ಯೆ ಮತ್ತು ಸ್ತ್ರೀ ಭ್ರೂಣ ಹತ್ಯೆಯು ಇಂದು ಸಾಮಾಜಿಕ ವ್ಯವಸ್ಥೆಯನ್ನು ಅಸಮತೋಲನಗೊಳಿಸಿದೆ, ಇದರಿಂದಾಗುವ ಅನೇಕ ದುಷ್ಪರಿಣಾಮಗಳನ್ನು ಮುಂದೆ ವಿಶ್ಲೇಷಿಸಲಾಗಿದೆ.

**ಹೆಣ್ಣು ಸಂತತಿ ಇಳಿಕೆಯಿಂದ ಸಾಮಾಜಿಕ ಅಸಮಾನತೆ**

ಮಾನವನ ಸಾಮಾಜಿಕ ಜೀವನ ಪ್ರಾರಂಭದಿಂದಲೂ ರೀತಿಗಳು ಅಸಮಾನತೆಗಳು ಸಾಮಾನ್ಯವೆನಿಸಿದ್ದವು. ಆದರೆ ಕಾಲಘಟ್ಟಗಳು ಉರುಳಿದಂತೆ ಅಪಾಯಕಾರಿ ಪರಿಣಾಮಗಳನ್ನು ಸೃಷ್ಟಿಸಿವೆ. ಅಂತವುಗಳಲ್ಲಿ ಹೆಣ್ಣು ಶಿಶು ಹತ್ಯೆ ಮತ್ತು ಸ್ತ್ರೀ ಭ್ರೂಣ ಹತ್ಯೆಯು ಒಂದಾಗಿವೆ, ಈ ಸಮಸ್ಯೆಯಿಂದ ಸಾಮಾಜಿಕ ರಚನೆಯ ಮೂಲವಾದ ಮಾನವ ಸಂತತಿಯನ್ನು ನೀಡುವ ಹೆಣ್ಣು ಸಂತತಿ ಇಂದು ಇಳಿಕೆಯಾಗುತ್ತಾ ಸಾಗಿದೆ. ಇದರಿಂದ ಮಾನವ ಕುಲವೇ ನಾಶವಾಗುತ್ತದೆಂಬ ಭೀತಿ ಎದುರಾಗಿದೆ. ಭಾರತದ ಕೆಲವು ರಾಜ್ಯಗಳಲ್ಲಿ ಅಂದರೆ ಹರಿಯಾಣದಲ್ಲಿ 1000 ಪುರಿಷರಿಗೆ 861 ಮಹಿಳೆಯರನ್ನು ಹೊಂದಿದೆ. ಚಂಡೀಘಢದಲ್ಲಿ 773, ದಮನ್ ಮತ್ತು ದಿಯುದಲ್ಲಿ 709, ಪಂಜಾಬನಲ್ಲಿ 874 ಹೀಗೆ ಗುಜರಾತ್, ದೆಹಲಿ, ಹಿಮಾಚಲ ಪ್ರದೇಶದಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಅನ್ಯ ರಾಷ್ಟಗಳಲ್ಲಿಯ ಅಂಕಿ ಅಂಶಗಳನ್ನು ಗಮನಿಸಿದರೆ 2011ರ ಜನಗಣತಿಯ ಪ್ರಕಾರ ಪಾಕಿಸ್ತಾನ (938) ಚೀನಾ (944) ಬಾಂಗ್ಲಾದೇಶ (953) ಹೀಗೆ ಇಳಿಕೆಯಲ್ಲಿದ್ದರೆ, ಇಂಡೋನೇಷಾ (1004} ನೈಜೀರಿಯ (1016) ಜಪಾನ್ (1041) ಬ್ರೆಜಿಲ್ (1025) ಯು.ಎಸ್.ಎ. (1029) ರಷ್ಯಾ (1041) ಹೀಗೆ ಏರಿಕೆಯಲ್ಲಿರುವುದು ಕಂಡುಬರುತ್ತದೆ. ಇದರಿಂದ ಮಹಿಳೆಯ ಸಂಖ್ಯೆ ಕಡಿಮೆ ಇರುವ ಕಡೆ ಆರ್ಥಿಕ ಸ್ಥಿತಿ ಏರು-ಪೇರಾಗಿರುವುದು ಕಂಡು ಬಂದಿವೆ, ಈ ಕುರಿತಾದ ಕೆಲವು ಅಂಕಿಅಂಶಗಳ ಮಾಹಿತಿಯನ್ನು ಈ ಕೆಳಗಿನಂತೆ ನೋಡಬಹುದು.

**ಕೋಷ್ಟಕ 1: ಭಾರತದಲ್ಲಿ ಲಿಂಗ ಅನುಪಾತ (1000 ಪುರುಷರಿಗೆ ಮಹಿಳೆಯರ ಪ್ರಮಾಣ)**

| ವರ್ಷ | ಮಹಿಳೆಯರ ಸಂಖ್ಯೆ | ವರ್ಷ | ಮಹಿಳೆಯರ ಸಂಖ್ಯೆ | ವರ್ಷ | ಮಹಿಳೆಯರ ಸಂಖ್ಯೆ | ವರ್ಷ | ಮಹಿಳೆಯರ ಸಂಖ್ಯೆ |
|---|---|---|---|---|---|---|---|
| 1901 | 974 | 1931 | 950 | 1961 | 941 | 1991 | 929 |
| 1911 | 962 | 1941 | 945 | 1971 | 930 | 2001 | 933 |
| 1921 | 955 | 1951 | 946 | 1981 | 934 | 2011 | 940 |

**ಲೈಂಗಿಕ ಅಪರಾಧಗಳು ಹೆಚ್ಚುವಿಕೆ**

ಮಾನವನ ಸಾಮಾಜಿಕ ಜೀವನದಲ್ಲಿಯ ಪ್ರಮುಖ ಬೇಡಿಕೆಗಳಾದ ಆಹಾರ, ಶಿಕ್ಷಣ, ವಸತಿಗಳಂತೆ ಲೈಂಗಿಕ ಬಯಕೆಯು ಒಂದು. ಈ ಬಯಕೆಯನ್ನು ಈಡೇರಿಸಿಕೊಳ್ಳಲು ಮಾನವನು ವಿವಾಹ ಸಂಸ್ಥೆಯನ್ನು ರೂಪಿಸಿಕೊಂಡಿದ್ದರೂ ವ್ಯಕ್ತಿ ಅನ್ಯ ಮಾರ್ಗಗಳಿಗೆ ಇಳಿದಿರುವನು. ಇದರಿಂದಾಗಿ ಗಣನೀಯವಾಗಿ ಇಳಿಕೆಯಾಗುತ್ತಿರುವ ಮಹಿಳೆಯರ ಪ್ರಮಾಣ ಒಂದು ಕಾರಣವಾಗಬಹುದು. ಲೈಂಗಿಕ ಕಿರುಕುಳ, ಅತ್ಯಾಚಾರ, ಅಪಹರಿಸುವಿಕೆ ಪ್ರಮಾಣಗಳು ಹೆಚ್ಚಾಗಬಹುದು.

**ಸಾಮಾಜಿಕ ಅನಾರೋಗ್ಯ ಸ್ಥಿತಿ**

ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆಯು ಸಾಮಾಜಿಕ ವ್ಯವಸ್ಥೆಯನ್ನು ಅನಾರೊಗ್ಯ ಸ್ಥಿತಿಗೆ ಕೊಂಡೊಯ್ದಿದೆ. ಅಂದರೆ ಇದರಿಂದಾಗಿ ಸಾಮಾಜಿಕ ಪರಿಸದಲ್ಲಿ ಮೌಲ್ಯಗಳು ಮಾಯವಾಗುತ್ತಿವೆ. ಅಣ್ಣ–ತಂಗಿ ತಾಯಿ ಎಂಬ ಸಂಬಂಧಗಳಿಗೆ ಕೊಡಲಿಪೆಟ್ಟು ಬೀಳುವ ಸಾಧ್ಯತೆಗಳು ಗೋಚರಿಸುತ್ತಿವೆ. ತನ್ನ ಮೂಲಭೂತ ಬೇಡಿಕೆಯನಿಸಿದ ಲೈಂಗಿಕ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಮಾನವ ವಾಮ ಮಾರ್ಗಗಳಿಗೆ ಇಳಿದಿರುವುದಿದೆ. ಇದರಿಂದ ನಾನಾ ರೀತಿಯ ಲೈಂಗಿಕ ರೋಗಗಳು ಹುಟ್ಟಿಕೊಂಡಿವೆ. ಅಲ್ಲದೆ ಹೆಣ್ಣಿನ ಸಂಖ್ಯೆ ಕಡಿಮೆಯಾಗುತ್ತಾ ಸಾಗಿದಂತೆ ಮಹಿಳೆಯರ ಸಾಗಾಣಿಕೆ, ಬಲತ್ಕಾರ, ಅಪಹರಿಸುವದು ಹೀಗೆ ಸಮಾಜಬಾಹಿರ ಕೃತ್ಯಗಳು ಹೆಚ್ಚುತ್ತಿವೆ.

**ಮಾನವ ಸಂತತಿ ನಶಿಸುವಿಕೆ**

ಹೆಣ್ಣು ಶಿಶು ಹತ್ಯೆ /ಸ್ತ್ರೀ ಭ್ರೂಣ ಹತ್ಯೆ ಎಂಬ ಘೋರ ಕೃತ್ಯವು ಸಾಮಾಜಿಕ ವ್ಯವಸ್ಥೆಯ ಅಥವಾ ರಚನೆಯ ಮೂಲವಾದ ಮಾನವ ಪೀಳಿಗೆಯನ್ನು ನಾಶಗೊಳಿಸುವ ಸ್ಥಿತಿಗೆ ತಂದಿದೆ. ಸಾಂಸ್ಕೃತಿಕ ಅನಿಷ್ಟ ಸಂಪ್ರದಾಯ ಪರಂಪರೆಗಳನ್ನು ಬಿಟ್ಟು ಮಾನವ ಹೊರ ಬರಲು ಇನ್ನೂ ಇಚ್ಚಿಸುತ್ತಿಲ್ಲ. ಇದರಿಂದಾಗಿ ಇಂತಹ ಸಮಸ್ಯೆಗಳಿಂದ ಮುಕ್ತವಾಗಲು ಸಾಧ್ಯವಾಗುತ್ತಿಲ್ಲ.

**ಭಾರತದಲ್ಲಿ ಸ್ತ್ರೀ ಭ್ರೂಣ ಹತ್ಯೆ ತಡೆಗಟ್ಟಲು ಸಲಹೆಗಳು**

ಯುವ ಸಮುದಾಯಕ್ಕೆ ಜಾಗೃತಿ ಮೂಡಿಸುವಲ್ಲಿ ಶಿಬಿರ ಹಾಗು ವಿಚಾರಗೋಷ್ಠಿಗಳನ್ನು ನಡೆಸುವುದು. ಭಾರತೀಯ ಸಮಾಜದಲ್ಲಿ ಭಯಾನಕ ಸಮಸ್ಯೆಯಾಗಿ ಕಂಡುಬರುವ ಸ್ತ್ರೀ ಭ್ರೂಣ ಹತ್ಯೆಯು ಸಾಮಾಜಿಕ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತಾ ಸಾಗಿದೆ. ಇದರಿಂದ ಮಾನವ ಸಮಾಜವೇ ನಾಶವಾಗುವ ಭೀತಿ ಇದೆ. ಸಾಮಾಜಿಕ ರಚನೆಯ ಮೇಲೆ ಹಾಗು ಸಮುದಾಯಗಳ ಮೇಲೆ ವಿನಾಶದ ದುರಂತವನ್ನುಂಟುಮಾಡಿದ ಸ್ತ್ರೀ ಭ್ರೂಣ ಹತ್ಯೆಯನ್ನು ತಡೆಗಟ್ಟುವಲ್ಲಿ ಯುವ ಸಮುದಾಯಕ್ಕೆ ಜಾಗೃತಿ ಮುಡಿಸುವಲ್ಲಿ ಶಿಬಿರ ಹಾಗು ವಿಚಾರಗೋಷ್ಠಿಗಳನ್ನು ನೆಡೆಸುವ ಅಗತ್ಯವಿದೆ. ವಿವಾಹ ಪೂರ್ವ ಯುವ ಸಮುದಾಯಕ್ಕೆ ಸಂಚಲನ ಮುಡಿಸುವ ಮತ್ತು ಜಾಗೃತಿಯನ್ನು ತರಲು ಮೇಲಿಂದ ಮೇಲೆ ಪ್ರಭಾವ ಬೀರುವ ವಿಚಾರಗೋಷ್ಠಿಗಳನ್ನು ನೆಡೆಸುವ ಅಗತ್ಯವಿದೆ.

**ಮಾಧ್ಯಮಗಳ ಮುಖಾಂತರ ನಿರಂತರ ಪ್ರಚಾರ ಕೈಗೊಳ್ಳುವುದು**

ಸಮಾಜದಲ್ಲಿ ಸ್ತ್ರೀ ಭ್ರೂಣ ಹತ್ಯೆಯನ್ನು ನಿರ್ಮೂಲನೆಗೊಳಿಸಲು ಇಂದು ಸಮೂಹ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಇಂದು ರಾಜ್ಯ, ರಾಷ್ಟ್ರ, ಅಂತರ್ ರಾಷ್ಟ್ರೀಯ ಮಟ್ಟದ ಪ್ರತಿಯೊಂದು ಸುದ್ದಿಗಳನ್ನು

ಮಾಧ್ಯಮಗಳು ಕ್ಷಣ-ಕ್ಷಣಗಳಲ್ಲಿ ಬಿತ್ತರಿಸಿ ಸಮಯ ಸಂದರ್ಭಗಳನ್ನು ವಿವರಿಸುತ್ತಿವೆ. ಸರಕಾರಗಳು ಮಾಧ್ಯಮಗಳನ್ನು ಪ್ರಾರಂಭಿಸಲು ಅನುಮತಿಸುವಾಗ ಸಾಮಾಜಿಕ ಪಿಡುಗಾದ ಸ್ತ್ರೀ ಭ್ರೂಣ ಹತ್ಯೆಯನ್ನು ನಿರ್ಮೂಲನೆಗೊಳಿಸಲು ಕಡ್ಡಾಯ ನಿಯಮ ರೂಪಿಸಬೇಕು. ಆಡಳಿತ ನಿರ್ವಹಣೆಯ ನಾಲ್ಕನೇಯ ಅಂಗವಾದ ಸಮೂಹ ಮಾಧ್ಯಮಗಳು ಇದು ತನ್ನ ಆದ್ಯ ಕರ್ತವ್ಯವೆಂದು ನಿರಂತರ ಪ್ರಚಾರದಲ್ಲಿ ತೊಡಗಿದಾಗ ಈ ದುರಂತದಿಂದ ಮುಕ್ತಿಗೊಳ್ಳಲು ಸಾಧ್ಯ.

**ಕಾಯ್ದೆಗಳನ್ನು ಬಿಗಿಗೊಳಿಸುವುದು ಮತ್ತು ಕಠಿಣವಾದ ಕಾನೂನುಗಳನ್ನು ಜಾರಿಗೆ ತರುವುದು**

ಸಮಾಜದಲ್ಲಿ ಸ್ತ್ರೀ ಭ್ರೂಣ ಹತ್ಯೆಯನ್ನು ನಿರ್ಮೂಲನೆಗೊಳಿಸಲು ಗರ್ಭಪಾತ ಸಂಬಂಧಿತ ಕಾನೂನು 1971ರಲ್ಲಿ, ಪೂರ್ವ ಪ್ರಸವ ಡಯಾಗ್ನೋಸ್ಟಿಕ್ ತಂತ್ರಗಳು ಆಕ್ಟ್ 1994 PNDT, ಸಂವಿಧಾನಿಕವಾಗಿ ಮತ್ತು ಕಾನೂನಾತ್ಮಕವಾಗಿ ಕಾಯ್ದೆಗಳನ್ನು ಜಾರಿಗೆ ತಂದಿರುವದು ನಿಜ. ಆದರೆ ಕಾನೂನುಗಳು ಸಡಿಲಗೊಂಡಾಗ ಸೂಕ್ತ ನಿಯಮಗಳನ್ನು ಹೊಂದದೆ ಹೋದಲ್ಲಿ ಒಂದು ಸಮಸ್ಯೆ ತನ್ನ ಭೀಕರತೆಯನ್ನು ಪ್ರದರ್ಶಿಸಬಹುದು. ಕಾರಣ ಕಟ್ಟುನಿಟ್ಟಾದ ಕಠಿಣ ಕ್ರಮಗಳನ್ನು ಜರುಗಿಸುವಂತಾದಲ್ಲಿ ಈ ಸಮಸ್ಯೆಯನ್ನು ನಿರ್ಮೂಲನೆಗೊಳಿಸಬಹುದು.

**ಲಿಂಗ ಪತ್ತೆ ಮಾಡುವದನ್ನು ನಿಯಂತ್ರಿಸಲು ಇನ್ನಷ್ಟು ಸೂಕ್ತ ಕ್ರಮಗಳನ್ನು ಜರುಗಿಸುವುದು**

ಸಮಾಜದಲ್ಲಿ ಸ್ತ್ರೀ ಭ್ರೂಣ ಹತ್ಯೆಯನ್ನು ನಿರ್ಮೂಲನೆಗೊಳಿಸಲು ಸಾರ್ವಜನಿಕವೆಂಬಂತೆ ದೇಶದ ಪ್ರತಿಯೊಂದು ಆಡಳಿತದ ಸರಕಾರಗಳು ಗ್ರಾಮ ಸಮುದಾಯದ ಪಂಚಾಯತ್ ಮಟ್ಟದಿಂದ ಈ ಬಗ್ಗೆ ಅರಿವು ಮೂಡಿಸುವ ಸೂಕ್ತ ಕ್ರಮಗಳನ್ನು ಜರುಗಿಸುವ ಕಾರ್ಯಕ್ರಮಗಳನ್ನು ಅನುಸ್ಠಾನಗೊಳಿಸಬೇಕು. ಉದಾಹರಣೆಗೆ: ಚಂಡಿಗಢದಲ್ಲಿಯ ಹೆಣ್ಣು ಮಗುವನ್ನು ಸಾಯಿಸುವದು, ಅದರಲ್ಲೂ ಭ್ರೂಣಾವಸ್ಥೆಯಲ್ಲಿ ಚಿವುಟಿ ಹಾಕುವುದನ್ನು ನಿಲ್ಲಿಸಲು ಒಂದು ಕೋಟಿ ರೂಪಾಯಿಗಳನ್ನು ಬಹುಮಾನವಾಗಿ ನೀಡಬೇಕಾಗಿದೆ. ಇದಕ್ಕಿಂತ ದೌರ್ಭಾಗ್ಯ ಮತ್ತೊಂದಿಲ್ಲ, ಅಂದರೆ ಪರಿಸ್ಥಿತಿಯು ಅಷ್ಟೊಂದು ಕುಲಗೆಟ್ಟು ಹೋಗಿದೆ.

ಹೆಣ್ಣು ಶಿಶುವಿನ ಹತ್ಯೆ, ರಸ್ತೆ ಬದಿಕಸದ ತೊಟ್ಟಿಯಲ್ಲಿ ಹೆಣ್ಣು ಮಗು/ಭ್ರೂಣ ಪತ್ತೆ ಹೆಣ್ಣು ಹೆತ್ತ ಮಹಾತಾಯಿಯ ಮೇಲೆ ದೌರ್ಜನ್ಯ ಎಂಬಂತಹ ವರದಿಗಳು ದೀನಾ ಬೆಳಗಾದರೆ ಕೇಳಿ ಕೇಳಿ ರೋಸಿ ಹೋಗಿರುವ ಸರಕಾರ ಈ ಹೀನ ಕೃತ್ಯಕ್ಕೆ ಕಡಿವಾಣ ಹಾಕಲು ವಿಭಿನ್ನವಾದ ದಾರಿ ಕಂಡುಕೊಂಡಿದೆ. ಅದೇನಂದರೆ ಹರಿಯಾಣದ ಮುಖ್ಯಮಂತ್ರಿಗಳಾದ ಭುಪಿಂಧರ್ ಸಿಂಗ್ ಹೂಡಾ ರವರು ಜಿಂದ್ ಜಿಲ್ಲೆಯ ಬೀವೀಪುರ ಗ್ರಾಮದ ಅಭಿವೃದ್ಧಿಗಾಗಿ ಒಂದು ಕೋಟಿ ವಿತರಿಸಿದ್ದಾರೆ. ಏಕೆಂದರೆ ಗ್ರಾಮದ ಖಾಪ್ ಮಹಾ ಪಂಚಾಯತ್ ಹಣ್ಣು ಮಗು/ಭ್ರೂಣ ಹತ್ಯೆ ಕೃತ್ಯವನ್ನು ಮಹಾ ಪಾಪವೆಂದು ಪ್ರಕಟಿಸಿದ್ದು, ಹಂತಕರಿಗೆ ಘೋರ ಶಿಕ್ಷೆ ವಿಧಿಸುವುದಾಗಿ ಘೋಷಿಸಿದೆ. ಇದಕ್ಕೆ ಅಲ್ಲಿಯ ಮಹಿಳೆಯರೂ ಸಾಥ್ ನೀಡಿದ್ದಾರೆ. ಹೀಗೆ ದೇಶದ ಪ್ರತಿಯೊಂದು ರಾಜ್ಯಗಳು ಈ ರೀತಿಯ ನಿರ್ಮೂಲನೆಗೆ ಸಹರಿಸುವಂತೆ ಜನ ಸಮುದಾಯಗಳಿಗೆ ತಿಳಿಯ ಪಡಿಸುವದು ಮತ್ತು ಗ್ರಾಮ ಮಟ್ಟದ ಕಾರ್ಯಕ್ರಮಗಳನ್ನು ಮಾಡುವುದು ಅಗತ್ಯವಾಗಿದೆ.

ಅಲ್ಲದೆ ಇಂದು ಕಠಿಣ ಕಾನೂನು, ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳ ನಡುವೆಯೂ ದೇಶದಲ್ಲಿ ಹೆಣ್ಣು ಭ್ರೂಣ ಹತ್ಯೆ ಅವ್ಯಾಹತವಾಗಿ ಮುಂದುವರಿಯುವ ಹಿನ್ನೆಯಲ್ಲಿ ಎಲ್ಲಾ ಅಲ್ಟ್ರಾಸೌಡ್

ಸ್ಕ್ಯಾನ್‌ಲ್ಯಾಬ್‌ನ ಯಂತ್ರಗಳಲ್ಲಿ ಆ್ಯಕ್ಟಿವ್ ಟ್ರ್ಯಾಕಿಂಗ್ ಸಾಧನವನ್ನು ಇನ್ಸ್ಟಾಲ್ ಮಾಡಬೇಕು ಎಂದು ಹರಿಯಾಣದ ಸಾರ್ವಜನಿಕ ಆಡಳಿತ ಮಂಡಳಿ ಆದೇಶ ನೀಡಿದೆ. ಅಂದರೆ ಅಲ್ಟ್ರಾಸೌಂಡ್ ಸ್ಕ್ಯಾನ್ ಮಾಡುವ ವೈದ್ಯರು ಯಂತ್ರಗಳಲ್ಲಿ ಆ್ಯಕ್ಟಿವ್ ಟ್ರ್ಯಾಕಿಂಗ್ ಸಾಧನವನ್ನು ಅಳವಡಿಸಿಕೊಳ್ಳುವಂತೆ ಹೇಳಿದೆ. ಈ ನಿಯಮ ಕಡ್ಡಾಯವಾಗಿದ್ದು, ಪಾಲಿಸದ ವೈದ್ಯರ ಕುರಿತು ಕಠಿಣ ಕ್ರಮಕೈಗೊಳ್ಳಲು ಮಂಡಳಿ ಮುಂದಾಗಿದೆ. ಈ ಸಾಧನವು ಸ್ಕ್ಯಾನಿಂಗ್ ವೇಳೆ ವೈದ್ಯರು ಯಾವ ತಪಾಸಣೆ ಹಾಗೂ ಯಾವ ರೀತಿಯ ತಪಾಸಣೆ ಯಾವ ಯಾವ ಸಾಧನಗಳನ್ನು ಪರೀಕ್ಷೆ ವೇಳೆ ಬಳಸಿದ್ದಾರೆ ಎಂಬೆಲ್ಲಾ ಮಾಹಿತಿಯನ್ನು ಮುಖ್ಯ ವೈದ್ಯಾಧಿಕಾರಿಗಳಿಗೆ ಆನ್‌ಲೈನ್ ಮುಖಾಂತರ ರವಾನಿಸಲಿದೆ. ಇಂತಹ ನಿಯಮವನ್ನು ದೇಶದ ಎಲ್ಲಾ ರಾಜ್ಯಗಳ ಪ್ರತಿಯೊಂದು ಪ್ರದೇಶದಲ್ಲಿ ನಿಯಮವನ್ನು ಜಾರಿಗೆ ತರಬೇಕು. ಒಟ್ಟಾರೆ ಭ್ರೂಣವನ್ನು ಕಂಡುಕೊಂಡು ಹತ್ಯೆಗೈಯಲು ಹಣದ ಆಮಿಷಕ್ಕೆ ಬಲಿಯಾಗಿ ದುಷ್ಟ ಜನರಿಗೆ ಸಹಾಯ ಮಾಡಿ ಪರೋಕ್ಷವಾಗಿ ಕಾರಣರಾಗುತ್ತಿರುವ ವೈದ್ಯರಿಗೆ ಇದೊಂದು ಎಚ್ಚರಿಕೆ ಗಂಟೆಯಾಗುವುದು.

**ಸಾಮಾಜಿಕ ಚಿಂತನೆಯ ಅಡಿಯಲ್ಲಿ ಸಮಸ್ಯೆ ನಿರ್ಮೂಲನೆಯಲ್ಲಿ ಸೂಕ್ತ ಚಿಂತನೆ**

ಸಮಾಜದಲ್ಲಿ ಸ್ತ್ರೀ ಭ್ರೂಣ ಹತ್ಯೆಯನ್ನು ನಿರ್ಮೂಲನೆಗೊಳಿಸಲು ಸಾಮಾಜಿಕವಾಗಿ ಹೆಚ್ಚಿನ ರೀತಿಯಲ್ಲಿ ಚಿಂತನೆ ಅಧ್ಯಯನಗಳು ಮಾಡಬೇಕಾಗಿದೆ. ಸಾಮಾಜಿಕ ದುರಂತಗಳೆನಿಸಿದ ಇಂತಹ ಸಮಸ್ಯೆಗಳ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯ ಅಧ್ಯಯನವಿಸುವ ಕ್ರಮಗಳನ್ನು ಕೈಕೊಳ್ಳಬೇಕು.

**ಉಪಸಂಹಾರ**

ಭಾರತೀಯ ಸಮಾಜದಲ್ಲಿ ಹೆಣ್ಣನ್ನು ಪೂಜ್ಯನೀಯವಾಗಿ ಕಾಣುವ ದೇಶವೆಂದು ಕರೆಯಿಸಿಕೊಂಡ್ಡಿದ್ದರೂ ಸಮಾಜದಲ್ಲಿ ಹೆಣ್ಣು ಶಿಶು ಹತ್ಯೆ/ಸ್ತ್ರೀ ಭ್ರೂಣ ಹತ್ಯೆಗಳು ಅಪಾಯಕಾರಿ ಮಟ್ಟದಲ್ಲಿ ಬೆಳೆಯುತ್ತಿರುವದು ಒಂದು ದುರಂತವೆ ಸರಿ. ಸಾಂಸ್ಕೃತಿಕ ನೆಲೆಯಲ್ಲಿ ಕಾಣಿಸಿಕೊಳ್ಳುವ ಈ ಪಿಡುಗು ಆರ್ಥಿಕ, ಸಾಮಾಜಿಕ ವ್ಯವಸ್ಥೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಇದರಿಂದಾಗಿ ಮನುಕುಲವೇ ನಾಶವಾಗುದೇನೂ ಎಂಬ ಭೀತಿಯು ಎದುರಾಗಿದೆ. ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಇದರ ಪರಿಣಾಮದ ಬಗ್ಗೆ ಅರಿವು ಮೂಡಬೇಕಾಗಿದೆ. ಯುವ ಸಮುದಾಯಗಳು ಈ ಬಗ್ಗೆ ಜಾಗೃತರಾಗಿ ಗ್ರಾಮ ಸಮುದಾಯಗಳಿಗೆ/ಮನೆ–ಮನೆಗೂ ತೆರಳಿ ಹೆಣ್ಣು ಶಿಶು ಹತ್ಯೆ/ಸ್ತ್ರೀ ಭ್ರೂಣ ಹತ್ಯೆಗಳು ನಡೆಯುವದನ್ನು ತಡೆಯುವಂತೆ ಜನರಿಗೆ ತಿಳಿಸಲು ಮುಂದಾಗಬೇಕು.

**ಪರಾಮರ್ಶನ ಗ್ರಂಥಗಳು**


- Bandewar. S. (2003). Abortion Services and Providers' Perceptions: Gender Dimensions. *Economic and Political Weekly*, Vol. XXXVIII No.21 May 24-30, pp. 2075-2081.
- Chunkath. S.R., and V.B. Athreya (1997). Female Infanticide in Tamil Nadu: some Evidence. *Economic and Political Weekly*, Vol. XXXII (17), WS pp. 22-29.

- Desai. N. (1988). *Born to die.* The Indian Post, 7th October, 1988, Bombay.
- Diaz. A.A. (1988). Amniocentesis and Female Foeticide. *Bulletin of the Indian Federation of Medical Guild*, July 56.
- Gangrade. K.D. (1988). Sex Determination–A Critique. *Journal of Social Change*, Vol. 18 No. 3, Pp. 63-70.
- Kapur. P.J. (1995). Girl Child Abuse: Violation of her Human Rights. *Social Change*, Vol. 25 No. 2-3, June-Sept. 1995, Pp. 3-18.
- Srinivasan. V. (1992). Death for female: Foeticide and infanticide in Salem District. *Front Line*, 9 October 1992.
- Sen. A.K. (1989). Gender and Co-operative Conflicts. In: Irene Tinker (ed.) *Women and World Development*, New York; Oxford University Press. Pp. 123-149.


IIMRD JOURNALS